ತೀರಾ ಸಾಧಾರಣ ಸೀರೆಯುಟ್ಟು, ಕೋಣೆಯ ಮೂಲೆಯಲ್ಲಿ ಮೊಣಕಾಲಿನ ಮೇಲೆ ತಲೆಯಿಟ್ಟು ಅರೆ ನಿದ್ರಾವಸ್ಥೆಯ ಸ್ಥಿತಿಯಲ್ಲಿದ್ದ ಬಸಮ್ಮನಿಗೆ, ತಾನಿರುವುದು ಬೇರೊಬ್ಬರ ಮನೆಯಲ್ಲೋ ಅಥವಾ ಮದುವೆಯ ಛತ್ರದಲ್ಲೋ ಎನ್ನುವ ಗೊಂದಲ ಬಂದ ಗಳಿಗೆಯಿಂದ ಕಾಡುತ್ತಿತ್ತು.

ಮುಂಜಾನೆ ಎರಡು ಗಂಟೆಗೇ ಎದ್ದು, ನಿತ್ಯವೂ ಅಭ್ಯಾಸವಿದ್ದ ತಣ್ಣೀರಿನಲ್ಲಿ ಸ್ನಾನದ ಶಾಸ್ತ್ರ ಮುಗಿಸಿ, ಬಚ್ಚಲುಮನೆಯ ಬಟ್ಟೆ ಪರದೆಯಿಂದ ಹೊರಬರುವ ವೇಳೆಗೆ, ಊರಿನ ಎಂಟತ್ತು ಜನರು ಪುಟ್ಟ ಗುಡಿಸಲಿನಂತ ಮನೆಯ ತುಂಬಾ ಓಡಾಡುತ್ತಿದ್ದುದು ಕಾಣಿಸುತ್ತಿತ್ತು. ಊರಿನಲ್ಲಿದ್ದ ಇಪ್ಪತ್ತೆರಡು ಮನೆಯ ಮಂದಿಗೆಲ್ಲಾ ದೊಡ್ಡವ್ವನಾಗಿದ್ದ ಮಂಜಮ್ಮ, ರೇಶಿಮೆ ಸೀರೆಯನ್ನೇ ಹೋಲುವ, ಮಡಚಿ ಮುದ್ದೆಯಾಗಿದ್ದ ಸೀರೆಯುಟ್ಟು, ಬಾಯಿತುಂಬಾ ಕವಳವನ್ನು ತುಂಬಿಕೊಂಡು, ದೊಡ್ಡದಾಗಿ ಮಾತಾಡುತ್ತ ಚಾವಡಿಯ ಗೋಡೆಗೆ ಒರಗಿ ಕುಳಿತಿದ್ದಳು.

ಅರ್ಥವಾಗದ ಖಾಲಿ ತಲೆಯಲ್ಲಿ ಅಡಿಗೆಕೋಣೆಯನ್ನು ಪ್ರವೇಶಿಸುತ್ತಿದ್ದಂತೆ, ಅಲ್ಲಿ ಅವ್ವ ನನ್ನ ಮೊದಲ ಮತ್ತು ಏಕೈಕ ಸೀರೆಯನ್ನು ಕೈಯಲ್ಲಿ ಹಿಡಿದು ನಿಂತಿದ್ದಳು. ಥಟ್ ಅಂತಾ ನೆನಪು ಎರಡು ವರ್ಷದ ಹಿಂದಕ್ಕೆ ಓಡಿತು. ದಿನ ಬೆಳಗ್ಗೆದ್ದರೆ ಅವ್ವ ಅಕ್ಕಪಕ್ಕದ ಮನೆಯ ಹೆಂಗಸರೊಟ್ಟಿಗೆ ಅಲವತ್ತುಕೊಳ್ಳುತ್ತಿದ್ದಳು. ಹದಿನಾಲ್ಕು ವರ್ಷ ತುಂಬಿದ ಮಗಳು ಇನ್ನೂ ಮುಟ್ಟಾಗಿಲ್ಲವೆಂಬುದು ಅವ್ವನ ಕೊರಗಾಗಿತ್ತು. ಮುಂದಿನ ಗಣೇಶ ಚತುರ್ಥಿಯ ದಿನ ಬೆಳಗಾಗುವುದರಲ್ಲಿ ಭಯಂಕರ ಹೊಟ್ಟೆನೋವಿನೊಂದಿಗೆ ಮುಟ್ಟಾಗಿದ್ದೆ. ಎರಡೂ ಒಟ್ಟಿಗೆ ಸೇರಿ ಅವ್ವ ಖುಷಿಯಿಂದ ಹಬ್ಬ ಆಚರಿಸಿದ್ದಳು. ಅದೇ ಖುಷಿಯಲ್ಲಿ, ಅಪ್ಪ ಸತ್ತ ಹದಿಮೂರು ವರ್ಷದ ಮೇಲೆ ಉಳಿದಿದ್ದ ಒಂಟಿ ಕಾಲುಂಗುರವನ್ನು ಇನ್ನೂರಾ ಮೂವತ್ತು ರೂಪಾಯಿಗೆ ಮಾರಿ, ಸಾಧಾರಣವಾದ ಒಂದು ಸೀರೆಯನ್ನು ತಂದು ಕೊಟ್ಟಿದ್ದಳು. ಮೂರನೆಯ ದಿನದ ಶಾಸ್ತ್ರದ ಅನಂತರ ಪೆಟ್ಟಿಗೆ ಸೇರಿದ್ದ ಹಸಿರು ಬಣ್ಣದ ಸೀರೆ, ಮತ್ತೆ ಇವತ್ತು ಅರಗತ್ತಲೆಯ ಕೋಣೆಯಲ್ಲಿ ಅವ್ವನ ಕೈಯಲ್ಲಿತ್ತು. ಹತ್ತಿರ ಬಂದ ಅವ್ವ ಬೇರೇನನ್ನು ಹೇಳದೆ, ನೇರವಾಗಿ ಆ ಸೀರೆಯನ್ನು ಉಡಿಸಲು ತೊಡಗಿದ್ದಳು. ಯಾವುದೂ ಅರ್ಥವಾಗದ ನಾನು, ಏನೂ ತಿಳಿಯದೆ ಪೆಚ್ಚಾಗಿ ನಿಂತಿದ್ದೆ. ಲಘುಬಗೆಯಲ್ಲಿ ನನ್ನನ್ನು ಸಿಂಗರಿಸಿದ ಅವ್ವ, ಹೊರಗೆ ನಿಂತಿದ್ದ ದೊಡ್ಡವ್ವನಲ್ಲಿಗೆ ಓಡಿದಳು. ಸ್ವಲ್ಪ ಹೊತ್ತಿನ ಗುಸು ಗುಸುವಿನ ಅನಂತರ ನನ್ನಲ್ಲಿಗೆ ಬಂದ ಇಬ್ಬರೂ, “ಕೇಳಿಲ್ಲಿ, ಯಾರರ ನಿನ್ನಕೂಡಾ ಏಟ್ ವಯಸ್ ನಡಿತೈತಿ ಅಂತಾ ಕೇಳಿರೆ, ನಿನ್ನೆಗೆ ಹದಿನೆಂಟು ತುಂಬೈತಿ ಅಂತಾ ಏಳ್ಬೇಕು” ಅಂತಾ ಹೇಳಿದ್ದು ಅವ್ವನ ಮಾತಾದರೂ ಅದರಲ್ಲಿ ದೊಡ್ಡವ್ವನ ಛಾಯೆಯೇ ಎದ್ದು ಕಾಣುತ್ತಿತ್ತು. ಸುಮ್ಮನೆ ತಲೆ ಅಲ್ಲಾಡಿಸಿದೆ. ಎಲ್ಲರೂ ಹೊರಡುವ ತರಾತುರಿಯಲ್ಲಿದ್ದರೆ, ಅವ್ವ ಮಾತ್ರ ಗೊಂದಲದಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದುದು ಕಾಣುತ್ತಿತ್ತು. ಕೈಗೆ ಕರವಸ್ತ್ರ ಮತ್ತು ಒಂದು ಸಣ್ಣ ಚೀಲವನ್ನು ಕೊಟ್ಟ ಅವ್ವ, “ನಿನ್ ಬಟ್ಟಿನಾ ಇದ್ರೊಳ್ಗ ಇಟ್ಟೇನಿ, ಜ್ವಾಪಾನ ಕಣವ್ವ. ಯಾರರ ಏನಾರ ಹೇಳಿರೆ ಹೊಟ್ಟೆಗಾಕಳವ್ವ” ಅಂತಾ ಹೇಳಿದ ಮಾತು ಆಗ ಅರ್ಥವಾಗಿತ್ತೋ ಇಲ್ಲವೋ ಈಗ ತಿಳಿಯುತ್ತಿಲ್ಲ. “ಮದಿಗೊಗ್ ಬರಾಕ್ ಯಾಕ್ ಈ ಪಾಟಿ ತಕಂಡ್ ಒಗಬೇಕು? ನೀನ್ ಬರಂಗಿಲ್ಲೇನು?” ಅಂತಾ ಕೇಳಿದ ಮಾತು ಅವ್ವನ ಹತ್ತಿರವೂ ಸುಳಿದಿರಲಿಲ್ಲ. ಒಟ್ಟು ಹದಿಮೂರು ಜನ ತರಾತುರಿಯಲ್ಲಿ ಅಂತೂರಿನ ಬಸ್ ನಿಲ್ದಾಣ ತಲುಪಿದೆವು. ವರ್ಷಕ್ಕೆ ಮೂರು ನಾಲ್ಕು ಸಲ ಇದೇ ರೀತಿ, ಇದೇ ಸಮಯದಲ್ಲಿ ಬಸ್ ನಿಲ್ದಾಣಕ್ಕೆ ಬರುತ್ತಿದ್ದ ಅನುಭವದ ಮೇರೆಗೆ ಇದೇನೂ ಹೊಸತೆನಿಸಿರಲಿಲ್ಲ. ಮೂರುಗಂಟೆಯ ಮೊದಲ ಬಸ್ಸಿಗೆ ನಮ್ಮವರನ್ನು ಹತ್ತಿಸಿ, ಉಳಿದವರು ಮತ್ತೆ ಪುನಃ ಹಿಂತಿರುಗಿ ನಡೆದು ಮನೆ ಸೇರುತ್ತಿದ್ದೆವು. ಆದರೆ, ಎಂದಿನಂತೆ ಹಿಂತಿರುಗುವ ಸರದಿ ಈ ಬಾರಿ ನನ್ನದಾಗಿರಲಿಲ್ಲ. ಹಾಗೆ ಬಸ್ಸು ಹಿಡಿದವರು ಎಲ್ಲಿ ಸೇರಿದರು ಎಂದು ಯಾವತ್ತೂ ಯೋಚಿಸಿರಲಿಲ್ಲ. ಅದು ಸರ್ವೇ ಸಾಮಾನ್ಯವಾಗಿತ್ತು. ಎಂಟು ಜನರ